5025(5316) ಶ್ರೀ. ಕಟ್ಟಾಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) :– ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

1) ರಾಜ್ಯದಲ್ಲಿ ಎಲ್ಲಲ್ಲಿ ಸರ್ಕಾರಿ ಆಯುರ್ವೇದ ಕಾಲೇಜುಗಳಿವೆ ? ಇವುಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ವಿಷಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

2) ಈ ಕಾಲೇಜುಗಳಲ್ಲಿ ಖಾಲಿ ಇರತಕ್ಕ ಭೋಧಕ ಹುದ್ದೆಗಳೆಷ್ಟು?

3) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಇಕ್ಬಾಲ್ ಆನ್ಸಾರಿ ವೈದ್ಯಕೀಯ ಶಿಕ್ಷಣ ಸಚಿವರು.

1) ರಾಜ್ಯದಲ್ಲಿ ಬೆಂಗಳೂರು, ಮೈಸೂರು ಮತ್ತು ಬಳ್ಳಾರಿಯಲ್ಲಿ ತಲಾ ಒಂದು ಸರ್ಕಾರಿ ಆಯುರ್ವೇದ ಕಾಲೇಜುಗಳಿವೆ.

ಇವುಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ವಿಷಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಈ ಕೆಳಕಂಡಂತಿದೆ.

	ಕಾಲೇಜು	ಪದವಿ	ಸ್ನಾತಕೋತ್ತರ	ಒಟ್ಟು
1.	ಬೆಂಗಳೂರು	295	63	358
2.	ಮೈಸೂರು	244	20	264
3.	ಬಳ್ಳಾರಿ	192	20	212
	ಒಟ್ಟು	731	103	834

2) ಖಾಲಿ ಇರುವ ಭೋಧಕ ಹುದ್ದೆಗಳ ವಿವರ ಈ ಕೆಳಕಂಡಂತಿದೆ

	ಹುದ್ದೆ	ಬೆಂಗಳೂರು	ಮೈಸೂರು	ಬಳ್ಳಾರಿ	ಒಟ್ಟು
1.	ಪ್ರಾಚಾರ್ಯರು	01	–	01	02
2.	ಪ್ರಾಧ್ಯಾಪಕರು	04	09	10	23
3.	ಸಹಾಯಕ ಪ್ರಾಧ್ಯಾಪಕರು	01	–	07	08
4.	ಉಪನ್ಯಾಸಕರು	18	13	15	46
	ಒಟ್ಟು	24	22	33	79

3) ಖಾಲಿ ಇರುವ ಪ್ರಾಚಾರ್ಯರು, ಪ್ರಾಧ್ಯಾಪಕರು, ಮತ್ತು ಸಹಾಯಕ ಪ್ರಾಧ್ಯಾಪಕರು ಹುದ್ದೆಗಳನ್ನು ಪದೋನ್ನತಿಯ ಮೂಲಕ ಭರ್ತಿ ಮಾಡಲು ಕ್ರಮತೆಗೆದು ಕೊಳ್ಳಲಾಗುತ್ತದೆ. ಉಪನ್ಯಾಸಕರು (ಆಯುರ್ವೇದ) ವೃಂದದ 43 ಹುದ್ದೆಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದಿಂದ ಭರ್ತಿಮಾಡಲು ಕರ್ನಾಟಕ ಲೋಕ ಸೇವಾ ಆಯೋಗವು ಈಗಾಗಲೇ ಅಧಿಸೂಚನೆ ಹೊರಡಿಸಿದೆ.

5027 (5607) ಶ್ರೀ ಕಿರಣ್ ಕುಮಾರ್ ಕೆ.ಎನ್. (ಕಳ್ಳಂಬೆಳ್ಳ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ತುಮಕೂರು ಜಿಲ್ಲೆಯಲ್ಲಿರುವ ಪದವಿ ಪೂರ್ವ ಕಾಲೇಜು, ಪ್ರೌಢಶಾಲೆ ಹಾಗೂ ಪ್ರಾಥಮಿಕ ಶಾಲೆಗಳೆಷ್ಟು; ವಿಧಾನಸಭಾ ಕ್ಷೇತ್ರವಾರು, ಸರ್ಕಾರಿ, ಅನುದಾನಿತ ಖಾಸಗಿ, ಅನುದಾನರಹಿತ ಖಾಸಗಿ ಶಾಲೆಗಳಾವುವು: (ವಿವರವಾದ ಮಾಹಿತಿ ನೀಡುವುದು)